<u>ದಿನಾಂಕ 29-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>
<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಎಸ್ ವಕೀಲರಿಂದ</u>

1) ನಾನು ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸವನ್ನು ಸುಮಾರು 7-8 ವರ್ಷಗಳಿಂದ ಮಾಡಿಕೊಂಡಿದ್ದೇನೆ. ನನ್ನ ವಿದ್ಯಾರ್ಹತೆ ಅಟೋಮೊಬೈಲ್ ಡಿಪ್ಲೋಮ್. ಕಟ್ಟಡದ ನಕಾಶೆ, ಅಂದಾಜು ಮೊತ್ತ, ನಿರ್ಮಾಣದ ಪ್ರಮಾಣ ಪತ್ರವನ್ನು ನಾನು ಮಾಡುವುದಿಲ್ಲ. ಪ್ರತಿವಾದಿ ನನ್ನ ಸಂಬಂಧಿ. ಆದ್ದರಿಂದ ಅವರ ಕಟ್ಟಡದ ನಿರ್ಮಾಣದ ಕಾಮಗಾರಿ ಪಡೆದಿದ್ದೇನೆ ಎಂದರೆ, ಅವರು ನನ್ನ ಕೆಲಸವನ್ನು ನೋಡಿದ್ದರು. ಇಲ್ಲಿಯವರೆಗೆ ನಾನು ಮೂರು ಕಟ್ಟಡಗಳನ್ನು ಮಾಡಿ ಮುಗಿಸಿದ್ದೇನೆ. ಆ ಮೂರು ಕಟ್ಟಡಗಳಿಗೆ ಇಂಜಿನಿಯರ್ ಆಗಿ ಬೇರೆಯವರು ಇದ್ದಾರೆ ಎಂದರೆ ನಿಜ. ಪ್ರತಿವಾದಿಯ ಕಟ್ಟಡಕ್ಕೂ ಕೂಡ ನಾನೇ ನೇಮಿಸಿದ ಬೇರೇ ಇಂಜಿನಿಯರ್ ಇದ್ದರು ಎಂದರೆ ನಿಜ. ಸದರಿ ಇಂಜಿನಿಯರ್ ಸಹ ಈ ಕಟ್ಟಡದ ನಿರ್ಮಾಣದ ಕಾರ್ಯವನ್ನು ನೋಡಿಕೊಳ್ಳುತ್ತಿದ್ದ ಇಂಜಿನಿಯರ್ ಯಾರು ಎಂದರೆ, ಅವರ ಹೆಸರನ್ನು ದಾಖಲೆಯಲ್ಲಿ ಬರೆದಿದ್ದೇನೆ. ಕೋಟೇಶನ್ ನ್ನು ಅವರೇ ಕೊಟ್ಟಿದ್ದಾರೆ. ಸದರಿ ಇಂಜಿನಿಯರ್ ರವರ ದಾಖಲಾತಿಗಳ ಮೇಲೆ ನಾನು ಮಾಡಿದ್ದೇನೆ ಎಂದರೆ, ಅದಕ್ಕಾಗಿ ಪಂಚಾಯಿತಿಯಲ್ಲಿ ಆಗುವುದಿಲ್ಲ ಎಂದು ಪ್ರತಿವಾದಿ ಹೇಳಿದ್ದರು, ನಾನೇ ಪಂಚಾಯಿತಿಯಲ್ಲಿ ನಿಂತು ಅದರ ದಾಖಲಾತಿಗಳನ್ನು ಮಾಡಿಸಿದ್ದೇನೆ.

2) ಕಟ್ಟಡದ ನಿರ್ಮಾಣದ ಆಗು ಹೋಗುಗಳಿಗೆ ಸಂಬಂಧಿಸಿಂತೆ ಪ್ರತಿವಾದಿ ಮತ್ತು ಇಂಜಿನಿಯರ್ ಗೆ ಯಾವುದೇ ಸಂಬಂಧ ಇಲ್ಲ. ನನಗೂ ಮತ್ತು ಇಂಜಿನಿಯರ್ ನಡುವೆ ಯಾವುದೇ ಕರಾರು ಆಗಿಲ್ಲ. ನನ್ನ ಇಂಜಿನಿಯರ್ ಗಳ ಎಲ್ಲಾ ಜವಾಬ್ದಾರಿಯನ್ನು ನಾನು ನಿರ್ವಹಿಸುತ್ತಿದ್ದೆ ಎಂದರೆ, ಪ್ರತಿವಾದಿಯೇ ಬಂದು ಕಟ್ಟಡ ಪೂರ್ಣಗೊಳಿಸಲು ಹೇಳಿದ್ದರಿಂದ, ನಾನು ನಿಂತು ಮಾಡಿದ್ದೆ. ಸದರಿ ಇಂಜಿನಿಯರ್ ನ್ನು ಈ ದಾವೆಯಲ್ಲಿ ವಿಚಾರಣೆಗೆ ತರಬಹುದಾ ಎಂದರೆ, ನಾನೇ ಎಲ್ಲಾ ನಿಂತು ಮಾಡಿದ್ದೇನೆ.

3) ನಿಪಿ-4ರ ಅಡಿಯಲ್ಲಿ ಒಟ್ಟು ನಿರ್ಮಾಣದ ಕ್ಷೇತ್ರ 223.03 ಚದರ ಮೀಟರ್. ನಾನು ಪ್ರತಿವಾದಿಗೆ ನಿರ್ಮಾಣದ ವೆಚ್ಚವನ್ನು ಚದರ ಅಡಿಯಲ್ಲಿ ಲೆಕ್ಕ ಮಾಡಿ ನಿರ್ಮಿಸಿ ಕೊಡುತ್ತೇನೆ ಎಂದು ಹೇಳಿದ್ದೆ. 1 ಚದರ ಮೀಟರ್ ಗೆ ಎಷ್ಟು ಚದರ ಅಡಿ ಎಂದರೆ, 3.3 ಚದರ ಅಡಿಗಳು. ನಿಪಿ-4ರ ನಕಾಶೆಯ ನಿರ್ಮಾಣದ ಅಂದಾಜು ವೆಚ್ಚ ಪಟ್ಟಿಯನ್ನು ಪ್ರತಿವಾದಿಗೆ ನಾನು ಕೊಟ್ಟಿದ್ದೆ. ಅದನ್ನು ಇಲ್ಲಿ ಹಾಜರುಪಡಿಸಿಲ್ಲ.

4) ನಾವು ನಿರ್ಮಾಣದ ಕೆಲಸವನ್ನು ಯಾವಾಗ ಆರಂಭಿಸಿದ್ದು ಎಂದರೆ, ಡಿಸೆಂಬರ್ 15, 2019ರಲ್ಲಿ. ಪ್ರತಿವಾದಿ ದಾವಾ ಹಾಕುವವರೆಗೆ ಒಟ್ಟು 25 ಲಕ್ಷಗಳಿಗೂ ಮಿಕ್ಕಿದ ಹಣವನ್ನು ಕೊಟ್ಟಿದ್ದಾರೆ. ನನ್ನ ನಿರ್ಮಾಣದ ಕೆಲಸ ಅಲ್ಲಿ ಎರಡು ವರ್ಷಗಳವರೆಗೆ ನಡೆದಿದೆ. ಪ್ರತಿವಾದಿ ನನಗೆ ಕೆಲಸದ ಹಣವನ್ನು ಪಾವತಿಸುವುದು ತಡ ಮಾಡಿಲ್ಲ ಎಂದರೆ, ಅವರು ತಡ ಮಾಡಿದ್ದರಿಂದ ನಿರ್ಮಾಣ ತಡ ಆಗಿದೆ. ಪ್ರತಿವಾದಿಯ ಹಣ ಪಾವತಿಯ ವಿಳಂಬದ ಬಗ್ಗೆ ನಾನು ಅವರಿಗೆ ನೋಟಿಸು ಕೊಟ್ಟಿಲ್ಲ, ಆದರೆ ಅವರು ನನಗೆ ಫೋನ್ ಮಾಡಿದಾಗ ತಡವಾಗುತ್ತಿದ್ದ ಬಗ್ಗೆ ಅವರಿಗೆ ಹೇಳಿದ್ದೇನೆ.

5) ಪ್ರತಿವಾದಿ ಹಿರಿಯಡ್ಕ ಠಾಣೆಯಲ್ಲಿ ನನ್ನ ವಿರುದ್ಧ ದೂರು ಕೊಟ್ಟಿದ್ದರು ಎಂದರೆ, ಎರಡು ದೂರು ಕೊಟ್ಟಿದ್ದರು. ಸದರಿ ದೂರಿನ ವಿಚಾರಣೆಯ ಸಮಯದಲ್ಲಿ ಪೊಲೀಸರು ನನ್ನ ಹೇಳಿಕೆ ಪಡೆದಿದ್ದರು ಎಂದರೆ ನಿಜ.

(ಈ ಹಂತದಲ್ಲಿ ಹೆಚ್ಚಿನ ಪಾಟೀಸವಾಲಿಗೆ ಸಮಯ ಕೇಳಿದ್ದರಿಂದ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ವಾಣಿಜ್ಯ ನ್ಯಾಯಾಧೀಶರು ,
ಉಡುಪಿ

PW. 1